3. ಇಸ್ಕಾನ್ ಮತ್ತು ರಾಗಿಗುಡ್ಡ ಆಂಜನೇಯ ದೇವಸ್ಥಾನಗಳನ್ನು ಪ್ರವಾಸಿ ಸಂಸ್ಥೆಗಳು ನಿರ್ವಹಿಸಲಾಗುತ್ತಿದೆ ಇಲಾಖೆಯು ಬೆಂಗಳೂರು ನಗರದ ಬಗ್ಗೆ ಹೊರತರುತ್ತಿರುವ ವರ್ಣರಂಜಿತ ಪ್ರವಾಸಿ ಮಾಹಿತಿ ಪುಸ್ತಕದಲ್ಲಿ ಇಸ್ಕಾನ್ ದೇವಸ್ಥಾನದ ಬಗ್ಗೆ ಮಾಹಿತಿ ಒದಗಿಸಲಾಗಿದೆ.

ಈ) 2000-2001ನೇ ಸಾಲಿನಲ್ಲಿ ಪ್ರವಾಸೋದ್ಯಮ ಇಲಾಖೆಯು ಬೆಂಗಳೂರು ನಗರದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ. 17.12 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ರಾಜ್ಯದಲ್ಲಿ ಪ್ರವಾಸಿ ಕೇಂದ್ರದಲ್ಲಿ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವುದು

1081 (1578) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಪ್ರವಾಸೋದ್ಯಮ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ 2000-2001ನೇ ಸಾಲಿನಲ್ಲಿ ಇಲ್ಲಿಯವರೆಗೆ ಯಾವ ಯಾವ ಪ್ರವಾಸಿ ಸೌಲಭ್ಯಗಳನ್ನು ಒದಗಿಸಲು ಹಣ ಖರ್ಚು ಮಾಡಲಾಗಿದೆ?

ಆ) ಮೇಲ್ಕಂಡ ಅವಧಿಯಲ್ಲಿ ರಾಜ್ಯದಲ್ಲಿನ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದಿಂದ ಕೇಳಿರುವ ಹಣವೆಷ್ಟು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು) :

ಅ) 2000-2001ನೇ ಸಾಲಿನಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿ ಹಾಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿರುವ ಬಗ್ಗೆ ವಿವರವನ್ನು ಅನುಬಂಧ- 1ರ ಪಟ್ಟಿಯಲ್ಲಿ ಲಗತ್ತಿಸಲಾಗಿದೆ.

ಆ) 2000-2001ನೇ ಸಾಲಿನಲ್ಲಿ ಪ್ರವಾಸಿ ಸ್ಥಳಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರಕ್ಕೆ ರೂ. 44.35 ಕೋಟಿಗಳ 114 ಯೋಜನೆಗಳಿಗೆ ಬೇಡಿಕೆ ಸಲ್ಲಿಸಲಾಗಿತ್ತು. ಈ ಪೈಕಿ ಕೇಂದ್ರ ಸರ್ಕಾರವು 44 ಯೋಜನೆಗಳನ್ನು ಆದ್ಯತಾ ಪಟ್ಟಿಯಲ್ಲಿ ಸೇರಿಸಿದ್ದು, ಇದಕ್ಕಾಗಿ ಅಂದಾಜು ರೂ. 575.00 ಲಕ್ಷಗಳನ್ನು ನಿಗಧಿಪಡಿಸಿದೆ.

ಅನುಬಂಧ - 1

ರೂ. ಲಕ್ಷಗಳಲ್ಲಿ

1	2	3
1.	ಶಿರಸಿಕೆರೆ ಹೊನ್ನಾವರ ರಸ್ತೆಯಲ್ಲಿ ಸಾರ್ವಜನಿಕ ಸೌಕರ್ಯ	2.40
2.	ಮುಲೆಕಾಮನಹಳ್ಳಿಯಲ್ಲಿ ಸಾರ್ವಜನಿಕ ಸೌಕರ್ಯ	8.86
3.	ಗುಲ್ಬರ್ಗಾದ ಗಾಣಗಾಪುರ ರಸ್ತೆಯಲ್ಲಿ ಸಾರ್ವಜನಿಕ ಸೌಕರ್ಯ	8.86
4.	ಬೆಳಗಾವಿಯ ಕಿಲ್ಲಾ ಕೋಟೆ ಕೆರೆ ಅಭಿವೃದ್ಧಿ	5.20

1	2	3
5.	ಬಾದಾಮಿಯ ಗುಹಾಂತರ ದೇವಾಲಯದ ಬಳಿ ಶೌಚಾಲಯ	8.86
6.	ಕಿಬ್ಬಳ್ಳಿ ಕ್ರಾಸ್‌ನಲ್ಲಿ ಶೌಚಾಲಯ	2.40
7.	ರಾಮದೇವರಕಟ್ಟಿಯಲ್ಲಿ ಶೌಚಾಲಯ	2.40
8.	ಹೊರನಾಡುನಲ್ಲಿ ಶೌಚಾಲಯ	2.40
9.	ಹಂಪೆಯಲ್ಲಿ ಶೌಚಾಲಯ	9.60
10.	ಶ್ರೀರಂಗಪಟ್ಟಣದಲ್ಲಿ ಹೆಚ್ಚುವರಿ 8 ಕಾಟೇಜು	11.07
11.	ನಂದಿಬೆಟ್ಟದಲ್ಲಿ ಹೆಚ್ಚುವರಿ ಸೌಲಭ್ಯ	4.50
12.	ಚಿತ್ರದುರ್ಗ ಕೋಟೆ ಹೊನಲು ಬೆಳಕು	5.56
13.	ಬಿಜಾಪುರ ಹೋಟೆಲ್ ಮಯೂರ ಆದಿಲ್‌ಶಾಹಿ ಉನ್ನತೀಕರಣ	16.00
14.	ಪಿಲಿಕುಲ (2) ಶೌಚಾಲಯ	4.80
15.	ಬನ್ನೇರುಘಟ್ಟದಲ್ಲಿ ಪರಿಸರ ಪ್ರವಾಸೋದ್ಯಮ	14.40
16.	ಶ್ರೀರಂಗಪಟ್ಟಣ, ಗುಂಬಜ್ ಬಳಿ ಶೌಚಾಲಯ	8.86
17.	ಶಿವನಸಮುದ್ರ ದರ್ಗಾದ ಬಳಿ ಶೌಚಾಲಯ	2.40
18.	ತುಂಗಭದ್ರ ಅಣೆಕಟ್ಟು ಹೋಟೆಲ್ ವಿಜಯನಗರ ಉನ್ನತೀಕರಣ	15.00
19.	ಸ್ಯಾಂಕಿ ಕೆರೆ ಜಟ್ಟಿ ನಿರ್ಮಾಣ	1.65
20.	ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಪ್ರವಾಸಿ ಸೌಲಭ್ಯ	8.44
21.	ಮುತ್ಯಾಲಮಡುವು ಪ್ರವಾಸಿ ಕುಟೀರ	3.40
22.	ಕಾವೇರಿ ಫಿಶಿಂಗ್ ಕ್ಯಾಂಪ್ ಪರಿಸರ ಪ್ರವಾಸೋದ್ಯಮ	13.62
23.	ಶಿರಸಿ ಯಾತ್ರಿ ನಿವಾಸ	14.40
24.	ಕಮಲಾಪುರ ಯಾತ್ರಿ ನಿವಾಸ	8.00
25.	ಮೇಲುಕೋಟೆ ಪ್ರವಾಸಿ ಸೌಲಭ್ಯ	4.71
26.	ತನಿಕೊಳ ರಸ್ತೆ ಬದಿ ಸೌಲಭ್ಯ	5.65
27.	ಗುಲ್ಬರ್ಗಾ ಪ್ರವಾಸಿ ಮಾಹಿತಿ ಕತೇಂದ್ರ	6.72

1	2	3
28.	ಕೂಡ್ಲಿಗಿ ರಸ್ತೆ ಬದಿ ಸೌಲಭ್ಯ	7.80
29.	ಬೆಳಗಾವಿ ಪ್ರವಾಸಿ ಸಂಕೀರ್ಣ	12.00
30.	ಧಾರವಾಡ ಯಾತ್ರಿ ನಿವಾಸದ ಸೌಲಭ್ಯ	2.40
31.	ದಾಂಡೇಲಿಗೆ ಜಲಕ್ರೀಡೆ ಉಪಕರಣ	2.50
32.	ಹಂಪಿ ಪ್ರವಾಸಿ ವಿಹಾರಧಾಮ	14.90
33.	ಜೆಟ್ ಬೋರ್ಡ್ ಮೋಟಾರ್ ದೋಣಿ ಖರೀದಿ, ಮೈಸೂರು, ಬೆಂಗಳೂರು, ಬೆಳಗಾಂ.	6.80
	ಒಟ್ಟು	**256.56**

ಹಾಲು ಉತ್ಪಾದಕರಿಗೆ ನೀಡುತ್ತಿರುವ ಹಾಲಿನ ದರ

1082 (1579) ಶ್ರೀ ಕಟ್ಟಾ ಸುಬ್ರಮಣ್ಯನಾಯ್ಡು (ಶಿವಾಜಿನಗರ) : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಮಿಲ್ಕ್ ಫೆಡರೇಷನ್ ಹಾಗೂ ಬೆಂಗಳೂರು ಡೈರಿಯ ಆಡಳಿತ ಮಂಡಳಿ ಪ್ರತಿ ದಿವಸ ಹಾಲು ಉತ್ಪಾದಕರಿಂದ ಪಡೆಯುತ್ತಿರುವ ಹಾಲಿನ ಪ್ರಮಾಣವೆಷ್ಟು?

ಆ) ಪ್ರತಿ ಲೀಟರ್ ಹಾಲಿಗೆ ಹಾಲು ಉತ್ಪಾದಕರಿಗೆ ನೀಡುತ್ತಿರುವ ಬೆಲೆ ಎಷ್ಟು?

ಇ) ಗ್ರಾಹಕರಿಂದ ಪ್ರತಿ ಲೀಟರ್ ವಸೂಲಿ ಮಾಡುತ್ತಿರುವ ಹಾಲಿನ ದರವೆಷ್ಟು?

ಈ) ಹಾಲಿನ ಬೆಲೆ ಏರಿಸದೆ ಹಾಲು ಉತ್ಪಾದರಿಕರಿಗೆ ಪ್ರತಿ ಲೀಟರ್ ಹಾಲಿನ ಬೆಲೆಯನ್ನು ನೀಡಲು ಸರ್ಕಾರ ಕ್ರಮ ಕೈಗೊಳ್ಳುತ್ತಿದೆಯೇ?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರು) :

ಅ) ಪ್ರಸ್ತುತ ಕರ್ನಾಟಕ ಹಾಲು ಮಹಾ ಸಂಡಳಿಯು ಪ್ರತಿ ದಿನ 18.20 ಲಕ್ಷ ಕೆ.ಜಿ. ಹಾಲನ್ನು ಸಂಗ್ರಹಿಸುತ್ತಿದ್ದು, ಬೆಂಗಳೂರು ಹಾಲು ಒಕ್ಕೂಟವು ದಿನಂಪ್ರತಿ ಸರಾಸರಿ 5.2 ಲಕ್ಷ ಕೆ.ಜಿ. ಹಾಲನ್ನು ಉತ್ಪಾದಕರಿಂದ ಖರೀದಿಸುತ್ತಿದೆ.

ಆ) ಶೇಕಡ 3.5 ಫ್ಯಾಟ್ ಮತ್ತು ಕನಿಷ್ಟ ಶೇ 8.5 ಎಸ್.ಎನ್.ಎಫ್. ಇರುವ ಹಾಲಿಗೆ ಪ್ರತಿ ಲೀಟರ್‌ಗೆ ರೂ. 8.50 ಬೆಂಗಳೂರು ಹಾಲು ಒಕ್ಕೂಟ ನೀಡುತ್ತಿದೆ.

ಇ) ಪ್ರತಿ ಲೀಟರ್ ಟೋನ್ಡ್ ಹಾಲನ್ನು ರೂ. 11.00 ರಂತೆ ಮಾರಾಟ ಮಾಡುತ್ತಿದೆ.